# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಎಚ್) ಇಲಾಖೆ

## ಅಧಿಸೂಚನೆ

*2018 ಡಿಸೆಂಬರ್ 28,*

ನಂಬ್ರ 20842/ಲೆಗ್. ಎಚ್2/2018/ಕಾನೂನು. *ತಿರುವನಂತಪುರಂ, 1194 ಧನು 13/*

*1940 ಪುಷ್ಯ 7.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ, 2018 ಡಿಸೆಂಬರ್ 28ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ವಿಜಯ ಕುಮಾರ್, ಟಿ.,**

*ವಿಶೇಷ ಕಾರ್ಯದರ್ಶಿ (ಕಾನೂನು),*

*ಕಾನೂನು ಕಾರ್ಯದರ್ಶಿ (ಪ್ರಭಾರ).*

G. 38/2019/GPC.

## 2018ರ 39ನೇ ಅಧಿನಿಯಮ

## 2018ರ ಕೇರಳ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧಿನಿಯಮ

1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ—1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮ (1969ರ 21)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) 2ನೇ ವಿಭಾಗ ಹಾಗೂ 3ನೇ ವಿಭಾಗದ (i)ನೇ ಖಂಡವು 2018 ಜುಲೈ 5ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಹಾಗೂ 3ನೇ ವಿಭಾಗದ (ii)ನೇ ಖಂಡವು 2018 ಅಕ್ಟೋಬರ್ 5ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 2ನೇ ವಿಭಾಗದ ತಿದ್ದುಪಡಿ.—1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮ (1969ರ 21) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದಲ್ಲಿ, (ಒಡಿ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಒಇ) "ಪ್ರಾಥಮಿಕ ಪ್ರವಾಸೋದ್ಯಮ ಸಹಕಾರಿ ಸಂಘ" ಎಂದರೆ, ಒಂದು ತಾಲೂಕಿಗೆ ಅದರ ಪ್ರವರ್ತನಾ ಪ್ರದೇಶವನ್ನು ಸೀಮಿತಗೊಳಿಸಿ, ಪ್ರವಾಸೋದ್ಯಮ ಚಟುವಟಿಕೆಗಳನ್ನು ಪ್ರೇರೇಪಿಸುವ, ಸಂಘಟಿಸುವ ಮತ್ತು ಅದಕ್ಕೆ ನೆರವಾಗುವ ಮುಖ್ಯ ಗುರಿಯನ್ನು ಹೊಂದಿದ ಒಂದು ಸಂಘ ಎಂದರ್ಥ:

ಆದರೆ, 2018 ಜುಲೈ 5ನೇ ದಿನಾಂಕದಂದು ಪ್ರಾಬಲ್ಯದಲ್ಲಿದ್ದಂತಹ ಸಂಘಗಳು, ಒಂದಕ್ಕಿಂತ ಹೆಚ್ಚು ತಾಲೂಕುಗಳಲ್ಲಿ ಪ್ರವರ್ತಿಸುತ್ತಿದ್ದರೆ, ಅಂತಹ ತಾಲೂಕುಗಳಲ್ಲಿ ಅದರ ಮುಖ್ಯ ಠಾಣೆ ನೆಲೆಗೊಂಡಿದ್ದರೆ, ಅಂತಹ ಸಂಘಗಳ ಅಂತಹ ತಾಲೂಕು ಪ್ರದೇಶದೊಳಗಿನ ಪ್ರವರ್ತನೆಯನ್ನು ಒಂದು ವರ್ಷದ ಕಾಲಾವಧಿಯೊಳಗೆ ಸೀಮಿತಗೊಳಿಸತಕ್ಕದ್ದು.".

3. 28ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 28ನೇ ವಿಭಾಗದಲ್ಲಿ,—

(i) (1ಡಿ) ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1ಡಿಎ) ಈ ಅಧಿನಿಯಮದಲ್ಲೋ ಯಾವುದೇ ನ್ಯಾಯಾಲಯದ ತೀರ್ಪಿನಲ್ಲೋ ಡಿಕ್ರಿಯಲ್ಲೋ ಆದೇಶದಲ್ಲೋ ಏನೇ ಒಳಗೊಂಡಿದ್ದರೂ, ಸಂಘದ ಪ್ರವರ್ತನಾ ಪ್ರದೇಶ ಹಾಗೂ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ವಿಭಜಿಸದ ಯಾವುದೇ ಪ್ರಾಥಮಿಕ ಪ್ರವಾಸೋದ್ಯಮ ಸಹಕಾರಿ ಸಂಘದ ನೋಂದಣಿ ಹಾಗೂ ಆ ರೀತಿಯಲ್ಲಿ ವಿಭಜಿಸದ ಆ ರೀತಿಯ ಯಾವುದೇ ನೋಂದಣಿ ಅನುಸರಿಸಿರುವ ಕಮಿಟಿಯ ರೂಪೀಕರಣವು ಅಸಿಂಧುವಾಗಿರುವುದಾಗಿದೆ ಹಾಗೂ ಅಂತಹ ಪ್ರತಿಯೊಂದು ಸಂಘಗಳಿಗೂ ರೆಜಿಸ್ಟ್ರಾರ್‌ರವರು ಒಬ್ಬ ಸ್ಪೆಷಲ್ ಆಫೀಸರನ್ನು ನೇಮಿಸತಕ್ಕದ್ದು.".

(ii) (1ಜೆ) ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

(1ಕೆ) ಈ ಅಧಿನಿಯಮದಲ್ಲಿ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳಲ್ಲಿ ಅಥವಾ ಉಪ ಕಾನೂನುಗಳಲ್ಲಿ ಏನೇ ಒಳಗೊಂಡಿದ್ದರೂ, ಒಂದಕ್ಕಿಂತ ಹೆಚ್ಚು ಕಂದಾಯ ಜಿಲ್ಲೆಯಲ್ಲಿ ಅಧಿಕಾರ ವ್ಯಾಪ್ತಿಯಿರುವ ಒಂದು ಪ್ರಾದೇಶಿಕ ಕ್ಷೀರ ಉತ್ಪಾದಕರ ಒಕ್ಕೂಟದಲ್ಲಿ, ಪ್ರತಿಯೊಂದು ಕಂದಾಯ ಜಿಲ್ಲೆಯನ್ನು ಪ್ರತಿನಿಧಿಸುವ ಸಮಿತಿಯ ಸದಸ್ಯರುಗಳನ್ನು ಅಂತಹ ನಿರ್ದಿಷ್ಟ ಕಂದಾಯ ಜಿಲ್ಲೆಯ ಸದಸ್ಯ ಸಂಘಗಳು ಸ್ವತಃ ತಮ್ಮೊಳಗಿನಿಂದ ಚುನಾಯಿಸಿರತಕ್ಕದ್ದು.

4. ರದ್ಧತಿ ಮತ್ತು ರಕ್ಷಣೆ.—2018ರ ಕೇರಳ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧ್ಯಾದೇಶ (2018ರ 46)ವು ಹಾಗೂ 2018ರ ಕೇರಳ ಸಹಕಾರಿ ಸಂಘಗಳ (ಮೂರನೇ ತಿದ್ದುಪಡಿ) ಅಧ್ಯಾದೇಶ (2018ರ 51)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶಗಳ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿಯೋ ಕೈಗೊಂಡಿರುವುದಾಗಿಯೋ ಭಾವಿಸತಕ್ಕದ್ದು.



Salim A Digitally signed by Salim A
Date: 2021.07.16 10:30:50
+05'30'